Q.—438. Sri B. T. KEMPA RAJ (Bangalore South—Scheduled Castes).—

Will the Government be pleased state:—

(*a*) when the estimate for Challaghatta Tank (Bangalore South) was prepared;

(*b*) the cost of estimate;

(*c*) whether there is any delay in completing the work;

(*d*) when they will complete the work?

A.—Sri Kadidal MANJAPPA (Minister for Revenue and Public Works).—

(*a*) During the year 1947.

(*b*) Rs. 2,13,600.

(*c*) Due to (i) high cost and (ii) submersion of valuable lands.

(*d*) Under reconsideration.

ಶ್ರೀ ಎ. ವಿ. ನರಸಿಂಹರೆಡ್ಡಿ.—(d) ಗೆ ಉತ್ತರದಲ್ಲಿ 2,13,600 ರೂಪಾಯಿಗಳೆಂದು ಹೇಳಿದ್ದೀರಿ. ಇದು ಸರಿಯಾಗಿದೆಯೆಂದು ತಮ್ಮ ಅಭಿಪ್ರಾಯವೇ?

Mr. SPEAKER.—That is the estimate that has been furnished.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಂದಾಜಾ, ನಮ್ಮ ಲೆಕ್ಕದ ಪ್ರಕಾರ ಅಷ್ಟಾಗುವುದಿಲ್ಲ. ಇದನ್ನು ಪರಿಶೀಲಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಡಿಮೆ ಆಗುವುದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಿಂದಿನ ಎಸ್ಟಿಮೇಟು ಬರೀ 90,000 ರೂಪಾಯಿಗಳು ಮಾತ್ರ ಎಂದು ತಿಳಿದುಬಂದಿದೆ. ಇದು ತಮ್ಮ ರಿಕಾರ್ಡ್‌ಗಳಲ್ಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. Actual cost of working is only Rs. 90,000.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗಿನ ರಿವೈಸ್ಡ್ ಎಸ್ಟಿಮೇಟು ಬಹಳ ಹೆಚ್ಚಿಗೆಯಾಗಿರುವುದರಿಂದ ಇದನ್ನು ಪುನಃ ಪರಿಶೀಲನೆಮಾಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಿನ್ನೆ ದಿವಸವೇ ತಾವು ಇದನ್ನು ಕೇಳಿದ್ದೀರಿ. ನಾನು ಅದರ ಮೇಲೆ ವಿಚಾರಿಸಿದೆ. ಎಲ್ಲಾ ಸರಿಯಾಗಿದೆಯೆಂದು ಗೊತ್ತಾಗಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—157 ಎಕರೆಗಳೆಂದು ಇಲ್ಲಿ ಹೇಳಿದ್ದೀರಿ. ವಾಸ್ತವವಾಗಿ 161 ಎಕರೆಗಳಾಗುತ್ತದೆ. ಇದನ್ನು verify ಮಾಡಿಸುತ್ತೀರಾ?

(ಉತ್ತರವಿಲ್ಲ)

ಶ್ರೀ ಎ. ವಿ. ನರಸಿಂಹರೆಡ್ಡಿ.—Percentage of return—0·55, ಎಂದು ತಿಳಿಸಿದ್ದೀರಿ. ಹಿಂದೆ ಎಗ್ಸಿಕ್ಯುಟಿವ್ ಎಂಜಿನಿಯರು ಮಾಡಿರುವ ವರದಿಯ ಪ್ರಕಾರ ಶೇ. 2·0 ಚಿಲ್ಲರೆಯಷ್ಟು return ಬರುತ್ತದೆಂದು ಹೇಳಿರುವುದು ತಮ್ಮ ರಿಕಾರ್ಡ್‌ಗಳಲ್ಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ರಿಕಾರ್ಡ್‌ನಲ್ಲಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಮಗೆ ಉತ್ತರಗಳನ್ನು ಒದಗಿಸಿಕೊಡುವವರು ಯಾರು?

(ಉತ್ತರವಿಲ್ಲ)

Mr. SPEAKER.—You must be satisfied. That is still under reconsideration. You please see answer to (*d*) of Question 438.

ಶ್ರೀ ಬಿ. ಟಿ. ಕೆಂಪರಾಜ್.—ಶೇಕಡ ಎಷ್ಟು ಪ್ರತಿಫಲ ಬಂದರೆ ಈ ಕೆಲಸವನ್ನು ಕೈಗೊಳ್ಳುವುದಕ್ಕೆ ಸಾಕಾಗುತ್ತದೆ?

Sri KADIDAL MANJAPPA.—It must be a remunerative scheme.

Sri B. T. KEMPARAJ.—What is the percentage that is required by the Government?

Mr. SPEAKER.—To your present question, there is the answer already given.

Sri B. T. KEMPARAJ.—Will the Government be pleased to state what is the percentage required if the work has to be undertaken?

Sri KADIDAL MANJAPPA.—Notice, Sir.

ಶ್ರೀ ಎಸ್. ಕರಿಯಪ್ಪ.—ಈ ಕೆರೆಯ ಕೆಲಸವನ್ನು ಪ್ರಾರಂಭಮಾಡಿರಲಿಲ್ಲವೆ?

Sri KADIDAL MANJAPPA.—Notice, Sir.

ಶ್ರೀ ಎಸ್. ಕರಿಯಪ್ಪ.—ಪ್ರಾರಂಭಮಾಡಿ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಿ, ಅಮೇಲೆ ಬೇರೊಂದು ಕೆಲಸ ತುರ್ತಾಗಿ ತೆಗೆದುಕೊಳ್ಳಬೇಕಾಗಿ ಬಂದ ಪ್ರಯುಕ್ತ ಸಿಬ್ಬಂದಿಯನ್ನು ವಾಪಸು ಕಳುಹಿಸಲಲ್ಲವೆ?

Sri KADIDAL MANJAPPA.—There are some difficulties regarding the acquisition of land. People protested against the acquisition and they claimed a higher compensation. Therefore, the work could not be proceeded with.

ಶ್ರೀ ಎಸ್. ಕರಿಯಪ್ಪ.—ಹಾಗಿದ್ದರೆ ಈ ಕೆರೆಗೆ ಅಚ್ಚುಕಟ್ಟು ಬಹಳ ಕಡಿಮೆ ಎಂದು ಹೇಳುತ್ತೀರಿ. ಒಂದು ತೂಬಿಟ್ಟಿರುತ್ತಾರೆಯೋ ಅಥವಾ ಹೆಚ್ಚಾಗಿ ಪೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಅದರ capacity ಮೇಲೆ ಇಡುತ್ತಾರೆ.

ಶ್ರೀ ಎಸ್. ಕರಿಯಪ್ಪ.—ತೂಬನ್ನಾದರೂ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಯಲ್ಲಿ ನೀರು ಎಷ್ಟಿರುತ್ತದೆಯೋ ಅದನ್ನು ನೋಡಿಕೊಂಡು, ಅದರ ಮೇಲೆ ತೂಬಿಡುತ್ತಾರೆ.

Sri L. SIDDAPPA.—What percentage of return is deemed to be a remunerative return, Sir?

Sri Kadidal MANJAPPA.—I have already answered that question.

Sri L. SIDDAPPA.—Is it not one of the works which is included in the five-year programme?

Sri Kadidal MANJAPPA.—I want notice.

Restoration of tanks in Devanahalli and Bangalore North Taluks.

Q.—347. Sri K. V. BYRE GOWDA (Bangalore North).—

Will the Government be pleased to state:—

(*a*) the number of tanks that are breached in Devanahalli and North Taluk, Bangalore;

(*b*) when the estimate to restore Shigehalli Tank in Jala Hobli, Devanahalli Taluk, was prepared;

(*c*) the steps taken to restore Shigehalli Tank;

(*d*) whether they are considering to construct a 'Lift dam' near Aibasapura to river Dakshina Pinayakini in Devanahalli Taluk?

A.—Sri Kadidal MANJAPPA (Minister for Revenue and Public Works).—

(*a*) In Devanahalli Taluk:
12 tanks out of which 11 tanks are Jodi tanks and one is Government tank (breached prior to 1910).
In Bangalore North Taluk:
10 tanks out of which nine are Jodi tanks and one Government tank (breached prior to 1910).

(*b*) During 1951.

(*c*) The project prepared for Rs. 41,000 is under scrutiny.

(*d*) No.

ಶ್ರೀ ಕೆ. ವಿ. ಬೈರೇಗೌಡ.—41,000 ರೂಪಾಯಿಗಳ ಅಂದಾಜು ಪರಿಶೀಲನೆಯಲ್ಲಿದೆಯೆಂದು ಉತ್ತರದಲ್ಲಿ ತಿಳಿಸಿದೆ, ಈ ಪೊಬಲಗನ್ನು 1953-54ರ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಡ್ಜೆಟ್ ನೋಡಿದರೆ ಗೋತ್ತಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಸೇರಿಸಿಲ್ಲ. ಈ ಕೆರೆಯನ್ನು ರಿಪೇರಿಮಾಡಬೇಕೆಂದು ರೈತರು ಸರ್ಕಾರದಲ್ಲಿ ಮನವಿ ಮಾಡಿಕೊಂಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಉತ್ತರದ (ಸಿ) ಭಾಗದಲ್ಲಿ the project is under scrutiny ಎಂದು ತಿಳಿಸಿದೆ, ಪೂರ್ತಿಯಾಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—'Scrutiny' ಎಂದರೆ ಹಾಗೆ ಅರ್ಥವಾಗುವುದಿಲ್ಲ.

Supply of water from Hessarghatta tank for cultivation.

Q.—350. Sri K. V. BYRE GOWDA (Bangalore North).—

Will the Government be pleased to state:—

(*a*) whether they are considering to supply excess of water in Hessarghatta Tank through the west channel for cultivation;

(*b*) when they would actually supply;

(*c*) the number of acres that would come under irrigation from this channel?

A.—Sri KADIDAL MANJAPPA (Minister for Revenue and Public Works).—

(*a*) No.

(*b*) Water cannot be supplied for irrigation purposes.

(*c*) This does not arise in view of reply to (*a*) and (*b*).

ಶ್ರೀ ಕೆ. ವಿ. ಬೈರೇಗೌಡ.—ವ್ಯವಸಾಯಕ್ಕೆ ನೀರನ್ನೊದಗಿಸುವುದಕ್ಕಾಗುವುದಿಲ್ಲವೆಂದು ಹೇಳಲಾಗಿದೆ, ಉತ್ತರದ (ಬ) ಭಾಗದಲ್ಲಿ. ಮುಖ್ಯ ಮಂತ್ರಿಗಳು ಆಲ್ಲಗೆ ಬಂದಾಗ ಅಲ್ಲಯ ಜನರು ಕೇಳಿಕೊಂಡಾಗ ಪಶ್ಚಿಮದ ನಾಲೆಯಿಂದ ಕೊಡುತ್ತೇವೆಂದು ಭರವಸೆ ಕೊಟ್ಟಿರಲಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಭರವಸೆ ಕೊಟ್ಟಿಲ್ಲ, ಒಂದೇ ಒಂದು ವರ್ಷ ಹಂಗಾಮಿಯಾಗಿ ನೂರು ಎಕರೆಗೆ ನೀರನ್ನು ಕೊಟ್ಟಿದೆ.

ಶ್ರೀ ಕೆ. ವಿ. ಬೈರೇಗೌಡ.—ಅಷ್ಟಕ್ಕೇ ಈಗಲೂ ಕೊಡಲು ತೊಂದರೆಯೇನು?

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚು ನೀರಿಲ್ಲ, ಇರುವುದು ಕುಡಿಯುವುದಕ್ಕೆ ಬೇಕಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಹೆಚ್ಚು ನೀರು ಬಂದಾಗ ಸಾಗುವಳಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಾಗ ನೋಡೋಣ.

(ಶ್ರೀ ವಿ. ಆರ್. ನಾಯ್ಡು ತೆಲುಗಿನಲ್ಲಿ ಒಂದು ಪ್ರಶ್ನೆ ಹಾಕಿದರು—ಉತ್ತರವಿಲ್ಲ.)